

ಮೇಲೆ ಮಾತ್ರ ವರ್ಡ್ಸ್‌ವರ್ಥ್ ಎಂದು ಮನಸ್ಸಿನಲ್ಲಿ ಬೆಲ್ಲು ಹೊಡೆಯಿತು.' ಯಾವುದೋ ಬಾಟಲಿಗೆ ಯಾವುದೋ ಮುಚ್ಚಳ ಹಾಕಿದಂತೆ ಹೊರಗಿನ ವಿಚಾರಗಳು ಒಳಗೂ ಪೂರ್ತಿ ಬರದೆ ಹೊರಗೂ ಪೂರ್ತಿ ನಿಲ್ಲದೆ ಸತಾಯಿಸುತ್ತಿದ್ದವು. ಪುಸ್ತಕಗಳು ದೊರಕದ ಹೊರಗಿನ ಭೌತಿಕ ಕಾರಣವಷ್ಟೇ ಅಲ್ಲ, ದೊರಕಿದವೂ ಬೌದ್ಧಿಕವಾಗಿ ಹತ್ತಿರವಾಗದ ಕಾಲದಲ್ಲಿ ಭೈರಪ್ಪನವರು ಓದುಗರಿಗೆ ಹತ್ತಿರವಾದರು. ಅವರ ಸಾಹಿತ್ಯವನ್ನು ಅನುಸರಿಸುವ ಒಂದು ದೊಡ್ಡ ಓದುಗ ವರ್ಗವು ಸೃಷ್ಟಿಯಾಯಿತು. ಒಂದು ಬಗೆಯಲ್ಲಿ ಅದೇ ಅವರ ಭಾಗ್ಯದ ಬಾಗಿಲೂ ಆಯಿತು. ತಮಗೆ ದೊರೆತ ಅಪಾರ ಓದುಗ ವರ್ಗವನ್ನು ಭೈರಪ್ಪನವರು ಎಂದಿಗೂ ನಿರಾಸೆಗೊಳಿಸಲಿಲ್ಲ. ನಿರಂತರವಾಗಿ ಬರೆಯುತ್ತಲೇ ನಡೆದರು. ಅವರ ಸಾಹಿತ್ಯ ಸೃಷ್ಟಿಯ ವೇಗ ಆಶ್ಚರ್ಯ ತರಿಸುತ್ತದೆ. ಕೆಲವು ವರ್ಷಗಳಲ್ಲಿ ಅವರು ಎರಡೆರಡು ಕಾದಂಬರಿಗಳನ್ನು ಪ್ರಕಟಿಸಿದ್ದಿದೆ.

ಅವರನ್ನು ಸೈದ್ಧಾಂತಿಕವಾಗಿ ವಿರೋಧಿಸುವವರು ಎಂದಿಗೂ ಅವರು ಓದುಗರಿಗೆ ಹತ್ತಿರವಾದ ಬಗೆಯನ್ನು ವಿಶ್ಲೇಷಿಸಲಿಲ್ಲ. ಈ ಬಗೆಯ ಕುರುಡು ವಿರೋಧವೇ ಭೈರಪ್ಪನವರನ್ನು ಮತ್ತೂ ಬೆಳೆಸಿತು. ತೊಂಬತ್ತರ ದಶಕಕ್ಕೂ ಹಿಂದೆ ಅವರ ಮೇಲಿನ ದ್ವೇಷ, ಅಲಕ್ಷ್ಯ, ಉಪೇಕ್ಷೆಗಳು ಯಾವ ಬಗೆಯಲ್ಲಿ ಇದ್ದವು ಎಂದು ಯೋಚಿಸಿದರೆ ನಾವು ಹಾದುಬಂದ ಮಾರ್ಗವು ದಿಗ್ಭ್ರಮೆಗೊಳಿಸುತ್ತದೆ. ಅವರ ಮೂರೋ ನಾಲ್ಕೋ ಕಾದಂಬರಿಗಳನ್ನು ಓದುವವರೆಗೂ ನಾನು ಅವರ ಫೋಟೊವನ್ನು ಎಲ್ಲಿಯೂ ನೋಡಿರಲಿಲ್ಲ. ಎಡಪಂಥಕ್ಕಷ್ಟೆ ಸೇರಿದವಂತಿದ್ದ ಬಹುಪಾಲು ಜನಪ್ರಿಯ ಪತ್ರಿಕೆಗಳು ಹಟ ಹಿಡಿದವಂತೆ ಅವರ ವಿಚಾರಗಳನ್ನಾಗಲಿ, ಕೊನೆಗೆ ಅವರ ಭಾವಚಿತ್ರವನ್ನೂ ಪ್ರಕಟಿಸುತ್ತಿರಲಿಲ್ಲ. ಮಾಧ್ಯಮಗಳಲ್ಲಿ ಎಡಪಂಥೀಯ ಲೇಖಕರ ವೈಯಕ್ತಿಕ ಮತ್ತು ಸಾಮಾಜಿಕ ವಿಚಾರಧಾರೆಗಳು ದಂಡಿಯಾಗಿ